Seventh Annual Report and Accounts of the Bangalore Animal Food Corporation Limited for the year ended 31st March, 1981.

as required under Section 619 A (3) of the Companies Act 1956.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಬಿಜಾಪುರದ ಬಗ್ಗೆ ಹೇಳಿಕೆ ಕೊಡುತ್ತೇವೆಂದು ಹೇಳಿದ್ದರು. ಅದೇ ರೀತಿ ಗಲ್ಫ್, ಅರಬ್ ರಾಷ್ಟ್ರಗಳಲ್ಲಿ ಉದ್ಯೋಗ ಕೊಡಿಸುತ್ತೇವೆಂದು ನ್ಯಾಷನಲ್ ಮತ್ತು ಸೀಮಾ ಏಜೆನ್ಸಿಯವರು ಮಾಡಿರುವ ವಂಚನೆ ಪ್ರಕರಣದ ಬಗ್ಗೆಯೂ ಹೇಳಿಕೆ ಕೊಡುತ್ತೇವೆಂದು ಹೇಳಿದ್ದರು. ಆದರೂ ಕೊಡಲಿಲ್ಲ. ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಅಮಿನಾನ್ ಸೇಠ್ ಎಂಬುವರು ಅರೆಸ್ಟ್ ಆಗಿದ್ದಾರೆ. ಈ ವಿಷಯ ಮೇಲಿನ ಸದನದಲ್ಲೂ ಬಂದಿದೆ. ಅಲ್ಲಿ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದರೂ ಕಿಳಮನೆಯಲ್ಲಿ ಇದುವರೆಗೂ ಹೇಳಿಕೆ ಕೊಟ್ಟಿಲ್ಲ. ನೂರಾರು ಮಂದಿ ಹಣ ಕಳೆದುಕೊಂಡು ಬೀದಿಯಲ್ಲಿದ್ದಾರೆ. ಅವರಿಗೆ ಪರಿಹಾರ ಇಲ್ಲ. ಆದ್ದರಿಂದ ಸರ್ಕಾರದವರು ಯಾವಾಗ ಹೇಳಿಕೆ ಕೊಡುತ್ತಾರೆ ಎಂಬುದನ್ನು ಹೇಳಬೇಕು ಮತ್ತು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ರಘುಪತಿ.—ಇವತ್ತೇ ಹೇಳಿಕೆ ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಗುಲ್ಬರ್ಗ ಎಂ.ಎಸ್.ಕೆ. ಮಿಲ್ಸ್ ಕಾರ್ಮಿಕರ ಮುಷ್ಕರದ ಬಗ್ಗೆ ನೋಟೀಸ್ ಕೊಟ್ಟು ೮೦ ದಿವಸ ಆಯಿತು.

ಉಪಾಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ಮುಗಿಯಲಿ.

ಶ್ರೀ ಎಂ. ರಘುಪತಿ.—ಎಂ.ಎಸ್.ಕೆ. ಮಿಲ್ ಬಗ್ಗೆ ೧೨ನೇ ತಾರೀಖು ಲೇಬರ್ ಕಮಿಷನರ್ ಎದುರುಗಡೆ ಕನ್‌ಸಿಲಿಯೇಷನ್ ನಡೆಯುತ್ತಿದೆ. ಅದು ಪೂರ್ತಿಯಾದ ನಂತರ ಅದೂ ವಿಫಲವಾದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಬೇಡಿಕೆಗೆ ಉತ್ತರ ಕೊಡುವಾಗ ಹೇಳಿದ್ದೇನೆ.

ಶ್ರೀ ಮಲ್ಲಾರಗೌಡ ಪಾಟೀಲ್.—ನಾನು ಸಂಕೇಶ್ವರದ ಬಗ್ಗೆ ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ.. ಅದು ಬರಲಿಲ್ಲ.

ಉಪಾಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಮುಗಿಯಲಿ.

CALLING ATTENTION TO A MATTER OF URGENT PUBLIC IMPORTANCE

ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಮಾನ್ಯ ಅಧ್ಯಕ್ಷರೆ, ಜನತೆ ಉಪಯೋಗಿಸತಕ್ಕ ವನಸ್ಪತಿಯಲ್ಲಿ ದನದ ಕೊಬ್ಬನ್ನು ಮಿಶ್ರ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಹೇಳಿಕೆಯನ್ನು ಸಭೆಯ ಮುಂದೆ ಇಡಬಯಸುತ್ತೇನೆ.

"ಜೈನ್ ಶುದ್ಧ ವನಸ್ಪತಿ ಕಂಪೆನಿಯವರು ವನಸ್ಪತಿಗೆ ದನದ ಕೊಬ್ಬನ್ನು ಕಲಬೆರಕೆ ಮಾಡಿ ಮಾರುತ್ತಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ ಈ ಬಗ್ಗೆ ಯಾವುದೇ ವ್ಯಕ್ತಿಯಿಂದಾಗಲಿ ಅಥವಾ ಸಂಸ್ಥೆಯಿಂದಾಗಲೀ ನಿರ್ದಿಷ್ಟವಾದ ದೂರು ಬಂದಿಲ್ಲ. ಹಾಗೂ ರಾಜ್ಯದ ಯಾವುದೇ ಪ್ರಯೋಗ ಶಾಲೆಗಾಗಲೀ ಅಥವಾ ಬೆಂಗಳೂರು ನಗರ ಸಭೆಯ ಪ್ರಯೋಗ ಶಾಲೆಗಾಗಲೀ ಪರೀಕ್ಷೆಗಾಗಿ ವನಸ್ಪತಿಯ ಮಾದರಿಯು ಬಂದಿಲ್ಲ. ಆದರೂ ಸಹ ದಿನಾಂಕ ೧೯ನೇ ಸೆಪ್ಟೆಂಬರ್ ೧೯೮೩ರಂದು ರಾಜ್ಯದ ಸಂಬಂಧಪಟ್ಟ ಎಲ್ಲಾ ಆಹಾರ ಕಲಬೆರಕೆ ಕಾಯಿದೆ ನಿಯಂತ್ರಣಾಧಿಕಾರಿಗಳಿಗೆ ಅನುಮಾನಾಸ್ಪದ ವನಸ್ಪತಿ ಕಲಬೆರಕೆ ಬಗ್ಗೆ ಎಚ್ಚರಿಕೆಯಿಂದಿರಲು ವಿಶೇಷ ಸುತ್ತೋಲೆಯನ್ನು ಕಳುಹಿಸಲಾಗಿದೆ.

ವನಸ್ಪತಿ ಕಲಬೆರಕೆ ಬಗ್ಗೆ ಯಾವುದಾದರೂ ನಿರ್ದಿಷ್ಟ ದೂರು ಸರಕಾರದ ಗಮನಕ್ಕೆ ಬಂದಲ್ಲಿ ಅಂತಹವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು."

೩-೦೦ ಪಿ.ಎಂ.

ಶ್ರೀ ಪಿ. ರಾಮದೇವ್.—ಅಧ್ಯಕ್ಷರೇ ಪ್ರಿವೆನ್ಷನ್ ಆಫ್ ಫುಡ್ ಅಡಲ್ಟ್ರೇಷನ್ ಆಕ್ಟ್ ಇದೆ. ಆ ಕಾನೂನಿನ ವ್ಯಾಪ್ತಿಯಲ್ಲಿ ರಾಜ್ಯದಾದ್ಯಂತ ಸಾಕಷ್ಟು ಶೋಧನೆ ಮಾಡತಕ್ಕದ್ದು ಇದೆ. ಇವತ್ತು ಇದು ಎಷ್ಟು ಸೀರಿಯಸ್ ಆಗಿದೆ ಎಂದರೆ ೮ ಜನರನ್ನು ನ್ಯಾಷನಲ್ ಸೆಕ್ಯುರಿಟಿ ಆಕ್ಟ್‌ನಲ್ಲಿ ದಸ್ತಗಿರಿ ಮಾಡಿ ಜೈಲಿನಲ್ಲಿ ಇಟ್ಟಿದ್ದಾರೆ. ವನಸ್ಪತಿಯಲ್ಲಿ ದನದ ಕೊಬ್ಬನ್ನು ಮಿಶ್ರಣ ಮಾಡಿ ಮಾರುತ್ತಿದ್ದಾರೆಂದು ವದಂತಿ ಇದೆ. ಈ ಬಗ್ಗೆ ರಾಜ್ಯದಲ್ಲಿ ಎಷ್ಟು ಜನರನ್ನು ತಾವು ಹಿಡಿದಿದ್ದೀರಿ ? ಎಷ್ಟು ಜನರ ಮೇಲೆ ಕೇಸ್‌ಗಳನ್ನು ಹಾಕಿದ್ದೀರಿ ? ದನದ ಕೊಬ್ಬನ್ನು ಮಿಶ್ರಣ ಮಾಡಿದ್ದರ ಬಗ್ಗೆ ಇತ್ತೀಚೆಗೆ ಒಂದು ಕೇಸ್ ಹಾಕಿದ್ದು ಆತನನ್ನು ಜೈಲಿಗೆ ಕಳುಹಿಸಲಾಗಿದೆ. ದನದ ಕೊಬ್ಬನ್ನು ಮಿಶ್ರಣ ಮಾಡಿದರೆ ನಮ್ಮೆಲ್ಲರ ಧಾರ್ಮಿಕ ಭಾವನೆಗೆ ಆಘಾತ ಬರುವ ವಿಚಾರವಾಗಿದೆ. ಆದ್ದರಿಂದ ತಕ್ಷಣ ಈ ಬಗ್ಗೆ ಆಸಕ್ತಿ ವಹಿಸಿ ಸಂಬಂಧಪಟ್ಟ ವ್ಯಾಪಾರಸ್ಥರ ಹತ್ತಿರ ಹೋಗಿ ಚಕ್ ಮಾಡಿ, ಸ್ಯಾಂಪಲ್ ಚಕ್ ಮಾಡಿ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತಿರಾ ? ವನಸ್ಪತಿಯಲ್ಲಿ ಕಲರಿಂಗ್ ಮ್ಯಾಟರ್ಸ್ ಹಾಕಿ ಬ್ಲಾರೆ. ಅನೇಕ ಕಡೆ ಮೆಟಾಲಿಕ್ ಮ್ಯಾಟರ್ಸ್‌ನ್ನು ಹಾಕುತ್ತಾರೆ. ಈ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ ದನದ ಕೊಬ್ಬನ್ನು ಮಿಶ್ರಣ ಮಾಡಿದ್ದಾರೆಂದು ಯಾವುದೇ ದೂರು ಬಂದಿರುವುದಿಲ್ಲ. ನನಗೆ ಗೊತ್ತಿರುವ ಹಾಗೆ ಯಾವ ದೂರು ಬಂದಿರುವುದಿಲ್ಲ.

ಶ್ರೀ ಪಿ. ರಾಮ್‌ದೇವ್.—ಬೆಂಗಳೂರು ಸಿಟಿ ಕಾರ್ಪೋರೇಷನ್‌ನವರು ೯೦ ಪರ್‌ಸೆಂಟ್ ಅನಿಮಲ್ ಫ್ಯಾಟ್ ಮಿಶ್ರಣ ಮಾಡಿದ್ದಾರೆಂದು ಹೇಳಿ ಒಬ್ಬರನ್ನು ಜೈಲಿಗೆ ಹಾಕಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಹೀಗೆ ಅನುಮಾನಾಸ್ಪದವಾದ ಅಂಗಡಿಗಳ ಅಥವಾ ಕಂಪನಿಗಳ ಮೇಲೆ ಗುಮಾನಿ ಬಂದು ಆ ಬಗ್ಗೆ ನಿರ್ದಿಷ್ಟವಾಗಿ ಇಂತಹವರೇ ಮಾಡುತ್ತಿದ್ದಾರೆಂದು ಅವರು ಸರ್ಕಾರದ ಗಮನಕ್ಕೆತಂದ ಪಕ್ಷದಲ್ಲಿ ಆ ಬಗ್ಗೆ ನಾವು ಉಗ್ರ ಕ್ರಮವನ್ನು ಕೈಗೊಳ್ಳಲು ಹಿಂದು ಮುಂದು ನೋಡುವುದಿಲ್ಲ. ಯಾವುದೇ ಕಂಪನಿ ಅಥವಾ ಅಂಗಡಿ ಬಗ್ಗೆ ನಮಗೆ ಸ್ಪೆಸಿಫಿಕ್ಕಾಗಿ ಕಂಪ್ಲೇಂಟ್ ಬಂದಿಲ್ಲ. ಈ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಮೇಲೆ ನಾನು ಸಂಬಂಧಪಟ್ಟ ಆಹಾರ ಕಲಬೆರಕೆ ಕಾಯಿದೆ ನಿಯಂತ್ರಣಾಧಿಕಾರಿಗಳ ಜೊತೆ ಸಭೆ ಮಾಡಿ ಯಾರ ಮೇಲೆ ತಮಗೆ ಸಂಶಯ ಬರುತ್ತದೆ ಅವರ ಮೇಲೆ ಕಣ್ಣಿಡಿ ಎಂದು ಹೇಳಿದ್ದೇನೆ, ಮಾನ್ಯ ಸದಸ್ಯರು ನಿರ್ದಿಷ್ಟ ಪ್ರಕರಣವನ್ನು ತಂದ ಪಕ್ಷದಲ್ಲಿ ಆ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಮನವಿಗಳು

ಶ್ರೀ ಕೆ. ಬಿ. ಮಲ್ಲಪ್ಪ.—ಅಧ್ಯಕ್ಷರೇ. ಈ ಸದನದಲ್ಲಿ ಹೊಗೆಸೊಪ್ಪು ಬೆಳಿಗಾರರ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳು ೫ನೇ ತಾರೀಖಿನ ಒಳಗೆ ಮಾರ್ಕೆಟ್ ಓಪನ್ ಮಾಡುತ್ತೇವೆ ಎಂದು ಹೇಳಿದರು. ಇದುವರೆವಿಗೂ ಮಾರ್ಕೆಟ್ ಓಪನ್ ಆಗಿಲ್ಲ. ಈಗಾಗಲೇ ಇವತ್ತು ೨ನೇ ತಾರೀಖು ಮುಗಿಯುತ್ತಾ ಬಂದಿದೆ. ಹೊಗೆಸೊಪ್ಪು ಬೆಳಿಗಾರರು ಕಷ್ಟದಲ್ಲಿದ್ದು, ಅವರು ಬೆಳೆದ ಹೊಗೆಸೊಪ್ಪು ಬಣ್ಣ ಕಳೆದುಕೊಳ್ಳುತ್ತಿದೆ. ಅದರ ಸತ್ವ ಹೋಗುತ್ತಿದೆ. ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲ. ಈ ಬಗ್ಗೆ ನಮಗೆ ಉತ್ತರ ಬೇಕು.

ಶ್ರೀ ಎ. ಲಕ್ಷ್ಮಿಸಾಗರ್.—ಈ ವಿಷಯದ ಬಗ್ಗೆ ಹಿಂದೆ ಚರ್ಚೆಯಾದಾಗ ನಾನೂ ಕೂಡಾ ಇಲ್ಲಿ ಇದ್ದು ಕೇಳಿದ್ದೇನೆ. ಮಾನ್ಯ ಕಾಳಮಂರಿಗೌಡರು ಹಾಗೂ ಇತರೇ ಸದಸ್ಯರು ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದಾರೆ. ನಾನು ಈ ವಿಚಾರವನ್ನು ಮಾನ್ಯ ಬಿ. ಎಲ್. ಗೌಡರಿಗೆ ತಿಳಿಸುತ್ತೇನೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವ ಬಗ್ಗೆ ಅವರಲ್ಲಿ ಬಿನ್ನಹ ಮಾಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಇದು ಬರೀ ಅರಕಲಗೂಡಿನ ಸಮಸ್ಯೆ ಅಲ್ಲ ಸ್ವಾಮಿ. ಪಿರಿಯಾಪಟ್ಟಣ, ಹುಣಸೂರು ತಾಲ್ಲೂಕಿನಲ್ಲಿಯೂ ಇದರ ಬಗ್ಗೆ ಆಹಾಕಾರ ಎದ್ದಿದೆ. ಕಂಪೆನಿಯವರು ಕೇವಲ ಮೊದಲ ಹಾಗೂ ಎರಡನೇ ಗ್ರೇಡಿನದನ್ನು ಮಾತ್ರ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಮಧ್ಯ ಪ್ರವೇಶ ಮಾಡದಿದ್ದರೆ ರೈತರಿಗೆ ಕೋಟ್ಯಾಂತರ ರೂಪಾಯಿ ಲುಕ್ಸಾನು ಆಗುತ್ತಿದೆ.